MYSORE LEGISLATIVE ASSEMBLY

THIRTY-SECOND DAY.

Saturday, 27th March 1954.

The House Met in the Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (SRI H. SIDDAIYA, B.A., LL.B.) in the Chair.

QUESTIONS AND ANSWERS.

Lands granted to Sri Birla & Co. near Koppa in Periyapatna Taluk.

Q.—384. **Sri S. M. MARIYAPPA** (Periyapatna).—

Will the Government be pleased to state :—

(*a*) the extent of lands granted by Government to Sri Birla & Co., Jayashree Textiles near Koppa in Periyapatna Taluk;

(*b*) the conditions of the Government with Jayashree Textiles Company regarding the grant of lands;

(*c*) the amount of *malki* fixed for the forest produce ;

(*d*) the amount of *malki* received ;

(*e*) the details of crops grown by the Jayashree Textiles Co. (yearwar information may be given from the date of grant up-to-date) ?

A.—**Sri Kadidal MANJAPPA** (Minister for Revenue and Public Works).—

(*a*) 18,250 acres.

(*b*) The conditions of the agreement are stipulated in a deed.

(*c*) No *malki* has been fixed.

(*d*) Nil.

(*e*) The company have not so far brought the land under flax cultivation. The company have been growing tobacco and groundnut on portions granted.

ಶ್ರೀ ಎಸ್. ಎಂ. ಮರಿಯಪ್ಪ.—ಈ ಸಂದರ್ಭದಲ್ಲಿ ಭೂಮಿಯನ್ನು ಕೊಡುವಾಗ ಮುಖ್ಯವಾಗಿ ವಿಧಿಸಿರುವ ಷರತ್ತುಗಳು ಯಾವುವು ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಏಳು ವರ್ಷಗಳೊಳಗೆ ಅರ್ಧ ಜಮೀನನ್ನು ಸಾಗುವಳಿಗೆ ತರಬೇಕು, ಆಮೇರೆ 10 ವರ್ಷಗಳಲ್ಲಿ ಉಳಿದ ಎಲ್ಲಾ ಜಮೀನನ್ನೂ ಸಾಗುವಳಿಗೆ ತರಬೇಕು ಎಂದು ವಿಧಿಸಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಮುಖ್ಯವಾಗಿ ಯಾವ ಬೆಳೆ ಬೆಳೆಯಬೇಕೆಂದು ಜಮೀನು ಪಡೆದಿದ್ದಾರೆ ?

ಅಧ್ಯಕ್ಷರು.—(*c*) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಅದನ್ನು ಹೇಳಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಅವರು ಹೊಗೆ ಸೊಪ್ಪು ಮತ್ತು ಕಡಲೆಕಾಯಿ ಬೆಳೆಯುವುದು ಷರತ್ತಿಗೆ ಚ್ಯುತಿಯಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಉತ್ತರ ಮೊನ್ನೆ ಆ ಪ್ರಶ್ನೆ ಬಂದಾಗ ಹೇಳಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಅದನ್ನು ತಾಲ್ಲೂಕು ಅಮಲ್ದಾರರು ವರದಿಮಾಡಿದರೆ ?

ಅಧ್ಯಕ್ಷರು.—ಮೊನ್ನೆ ಅದನ್ನೆಲ್ಲಾ ಹೇಳಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಅಲ್ಲಿರುವ ಮರಗಳನ್ನು ಕತ್ತರಿಸಿ ಮಾರುತ್ತಿದ್ದಾರೆ. ಅದಕ್ಕೆ ಅವಕಾಶ ಕೊಟ್ಟಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಅನುಮತಿ ಕೊಟ್ಟಿಲ್ಲ. ಕತ್ತರಿಸಿದ ಮರಗಳನ್ನು ಸರ್ಕಾರದ ಸ್ವಾಧೀನಕ್ಕೆ ಒಪ್ಪಿಸಬೇಕೆಂದು ಅಗ್ರಿಮೆಂಟ್‌ನಲ್ಲಿ ಹೇಳಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಅಲ್ಲಿ ಸರ್ಕಾರದ ಸೂಪರ್‌ವಿಷ್ ಇದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಎಸ್. ಎಂ. ಮರಿಯಪ್ಪ.—ಯಾರು ನೋಡಿ ಕೊಳ್ಳುತ್ತಾರೆ ?

(ಉತ್ತರವಿಲ್ಲ.)

Tenders for Construction of R. C. C. Tank at Maddur.

Q.—455. **Sri B. HUTCHE GOWDA** (Turuvekere).—

Will the Government be pleased to state :—

(*a*) whether tenders were called for construction of R. C. C. tank at Maddur to supply water to Maddur town ;

(*b*) how many tenders were received ; if all of them were accompanied with deposits and in time ;

(SRI B. HUTCHE GOWDA.)

(*c*) how many tenders were rejected by the competent officer;

(*d*) whether the belated tender without the deposit money was accepted by the superior officer: who is this contractor;

(*e*) whether it is not advisable to call for new tenders in which case Government could have gained by it?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Two. Only one was in time and accompanied by the required earnest deposit.

(*c*) One.

(*d*) Yes; Sri Mari Gowda.

(*e*) This is a matter of opinion. The matter is however under consideration.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ಟೆಂಡರುಗಳು ಬಂದಿವೆ? ಎಷ್ಟೆಷ್ಟು ಹಣಕ್ಕೆ ಬಂದಿವೆ? ಅದರಲ್ಲಿ ಯಾವುದು ಜಾಸ್ತಿ ಮೊಬಲಗಿಗೆ ಬಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಮರಿಗೌಡ ಎಂಬವರಿಂದ 19,472 ರೂಪಾಯಿಗಳಿಗೆ, ಮೆನರ್ಸ್ ಶ್ರೀನಿವಾಸ್ ಅಂಡ್ ಕೋ ರವರಿಂದ 23,111 ರೂಪಾಯಿಗಳಿಗೆ—ಹೀಗೆ ಎರಡು ಬಂದಿವೆ.

Sri B. HUTCHE GOWDA.—Was it in time, Sir?

Sri Kadidal MANJAPPA.—Few minutes late. 7 ನಿಮಿಷಗಳೆಂದು ಕಾಣುತ್ತದೆ.

Sri B. HUTCHE GOWDA.—Was it accompanied by deposit amount?

ಶ್ರೀ ಕಡಿದಾಳ್ ಮಂಜಪ್ಪ.—ಅದು ಠೇವಣಿ ಮೊಬಲಗಿನೊಡನೆ ನಲ್ಲಿಸಲ್ಪಡಲಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಕಾಲ ಮೀರಿ ಠೇವಣಿ ಮೊಬಲಗಿಲ್ಲದೆ ಬಂದಿರುವುದನ್ನು ಸ್ವೀಕರಿಸಬಹುದೆ?

ಶ್ರೀ ಕಡಿದಾಳ್ ಮಂಜಪ್ಪ.—ಠೇವಣಿ ಮೊಬಲಗನ್ನು ಡಿಪಾಜಿಟ್‌ಮಾಡುವುದಕ್ಕೆ ಖಜಾನೆ ಮುಚ್ಚಲ್ಪಟ್ಟಿತ್ತು. ಅನಂತರ ಮಾಡುತ್ತೇವೆಂದು ಹೇಳಿದ ಮೇರೆ ಟೆಂಡರನ್ನು ಒಪ್ಪಿದ್ದಾರೆ. ಅದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಬಿ. ಹುಚ್ಚೇಗೌಡ.—ಇನ್ನೂ ಆ ವಿಚಾರದಲ್ಲಿ ತೀರ್ಮಾನವಾಗಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅದನ್ನು ಕಾನೂನಿನಗನುಸಾರವಾಗಿ ತೀರ್ಮಾನ ಮಾಡುತ್ತೀರಾ? ಹೊಸದಾಗಿ ಟೆಂಡರನ್ನು ಇಂಥ ಸಂದರ್ಭದಲ್ಲಿ ಕರೆಯಬೇಕೆಂದು ನಿಯಮವಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಲಾಭದಾಯಕವಾಗಿಯೂ ಮತ್ತು ಕಾನೂನಿಗೆ ವಿರುದ್ಧವಾಗಿಲ್ಲದೆಯೂ ಇದ್ದರೆ lowest ಟೆಂಡರನ್ನು ಒಪ್ಪಬಹುದು.

ಶ್ರೀ ಬಿ. ಹುಚ್ಚೇಗೌಡ.—ಈಗ ಠೇವಣಿ ಮೊಬಲಗು ಸರಕಾರದಲ್ಲಿ ಬಂದಿಲ್ಲದಿರುವುದರಿಂದ ಬೇರೆಯವರು ಟೆಂಡರು ಕೊಟ್ಟರೆ ತೆಗೆದುಕೊಳ್ಳುತ್ತೀರಾ?

Sri Kadidal MANJAPPA.—The whole question is under consideration.

ಶ್ರೀ ಜಿ. ನಾರಾಯಣಗೌಡ.—ನಾಲ್ಕು ಸಾವಿರದ ರೂಪಾಯಿಗಳಷ್ಟು ಕಡಮೆ ಮೊಬಲಗಿಗೆ ಟೆಂಡರು ಬಂತೆಂದು ತಾನೆ ಅದನ್ನು ಸ್ವೀಕರಿಸಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಜಿ. ನಾರಾಯಣಗೌಡ.—ಹೀಗೆ ಸ್ವೀಕಾರ ಮಾಡಿದರೆ ಸರ್ಕಾರಕ್ಕೆ ಉಳಿತಾಯವಲ್ಲವೆ?

Sri Kadidal MANJAPPA.—Quite evident.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಪುನಃ ಟೆಂಡರನ್ನು ಕರೆದರೆ ಇನ್ನೂ ಕಡಮೆ ಮೊಬಲಗಿಗೆ ಬರುವ ಸಂಭವವಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ.

Tour of Ministers.

Q.—760. **Sri B. RACHAIAH** (Yelandur—Scheduled Castes).—

Will the Government be pleased to state:—

(*a*) the total length toured by each Minister during 1952-53 and 1953-54, both outside and inside the State;

(*b*) the number of addresses received by each Minister during the said period;

(*c*) the number and nature of promises made by each Minister in their tour;

(*d*) whether they have kept their tour notes;

(*e*) how many Ministers have toured in Chamarajanagar, Yelandur and T.-Narsipur taluks and the number of promises made by them?

A.—**Sri K. HANUMANTHAIYA** (Chief Minister).—

(*a*)—